2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 110/2021</u>

| | | |
|---|---|---|
| ಸಾಕ್ಷಿದಾರರ ಹೆಸರು | - ಇಂದ್ರಮ್ಮ | ಪಿಡಬ್ಲೂ - 4 |
| ಗಂಡನ ಹೆಸರು | - ಗೋವಿಂದಪ್ಪ | ಸಿಡಬ್ಲೂ -3 |
| ವಯಸ್ಸು | - 60 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಹಾಲಿ ವಾಸ ಕಡೂರು, ಸ್ವಂತ ಬೀರೂರು | |

ದಿನಾಂಕಃ 30.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು, ಆತ ನಮ್ಮ ಊರಿನವನು. ಪ್ರಾಸಾ.1 ಮತ್ತು ಪ್ರಾಸಾ.2 ನನ್ನ ಅಣ್ಣನ ಮಕ್ಕಳು. ಪ್ರಾಸಾ.3 ನನ್ನ ಅತ್ತಿಗೆ. ಚಾಸಾ.5 ಗೊತ್ತು. ಚಾಸಾ.7 ನನ್ನ ಮಗ.

2. ನನ್ನ ಸ್ವಂತ ಊರು ಬೀರೂರು ಆದರೆ ನಾನು ಕಡೂರಿನಲ್ಲಿ ವಾಸವಾಗಿದ್ದೇನೆ. ಪ್ರಾಸಾ.1 ರಿಂದ ಪ್ರಾಸಾ.3 ರವರು ಬೀರೂರಿನಲ್ಲಿ ವಾಸವಾಗಿದ್ದಾರೆ. ಬೀರೂರಿನಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಜಮೀನು ಇದೆ. ಅದರ ಸರ್ವೆ ನಂಬರ್ 173/P1, ಅದರ ವಿಸ್ತೀರ್ಣ ಅಂದಾಜು 2 ಎಕರೆ ಇದೆ. ಸದರಿ ಜಮೀನು ನಮ್ಮ ತಾಯಿಯಿಂದ ಬಂದಿದ್ದು ಪ್ರಸ್ತುತ ಪ್ರಾಸಾ.3 ರವರ ಹೆಸರಿನಲ್ಲಿದೆ. ಸದರಿ ಜಮೀನನ್ನು ನಾವೆಲ್ಲರೂ ಒಟ್ಟಿಗೆ ಸೇರಿ ಉಳುಮೆ ಮಾಡುತ್ತಿದ್ದೇವೆ.

3. ನಮ್ಮ ಜಮೀನಿನ ಪಕ್ಕದಲ್ಲಿ ಆರೋಪಿಯ ಅಕ್ಕ ಚೂಡಾಮಣಿಗೆ ಸೇರಿದ ಜಮೀನು ಇದೆ. ಸದರಿ ಜಮೀನನ್ನು ಚೂಡಾಮಣಿ

ಮತ್ತು ಆಕೆಯ ಗಂಡ ಲಕ್ಷ್ಮಣ ಉಳುಮೆ ಮಾಡಿಕೊಂಡಿದ್ದಾರೆ. ಆರೋಪಿ ಮತ್ತು ಆತನ ಅಣ್ಣನಾದ ಪ್ರಕಾಶ ನಮ್ಮ ಜಮೀನಿನ ಪೈಕಿ ಒಂದು ಎಕರೆಯಷ್ಟು ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರು. ಆ ರೀತಿ ಆರೋಪಿ ಮತ್ತು ಆತನ ಅಣ್ಣ ನಮ್ಮ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದ ಬಗ್ಗೆ ನಮ್ಮ ನಡುವೆ ಜಗಳವಾಗಿತ್ತು.

4. ದಿನಾಂಕ 14.05.2020 ರಂದು ನಾನು ಚಾಸಾ.5 ರವರ ಟ್ರಾಕ್ಟರನ್ನು ಬಾಡಿಗೆಗೆ ಪಡೆದುಕೊಂಡು ಮೇಲೆ ಹೇಳಿದ ಜಮೀನನ್ನು ಉಳುಮೆ ಮಾಡಿಸುತ್ತಿದ್ದೆನು. ಆಗ ಸದರಿ ಟ್ರಾಕ್ಟರನ್ನು ಚಾಸಾ.5 ರವರು ಚಾಲನೆ ಮಾಡುತ್ತಿದ್ದರು. ಆ ಸಮಯದಲ್ಲಿ ಟ್ರಾಕ್ಟರನ್ ಡೀಸೆಲ್ ಖಾಲಿಯಾಗಿದ್ದರಿಂದ ಚಾಸಾ.5 ರವರು ಮಾರನೇ ದಿನ ಜಮೀನನ್ನು ಉಳುಮೆ ಮಾಡಿಕೊಡುವುದಾಗಿ ಹೇಳಿ ಟ್ರಾಕ್ಟರನ್ನು ತೆಗೆದುಕೊಂಡು ಹೋದರು.

**5.** ದಿನಾಂಕ 15.05.2020 ರಂದು ಚಾಸಾ.5 ರವರು ಬೆಳಿಗ್ಗೆ 9.30 ಗಂಟೆಗೆ ಟ್ರಾಕ್ಟರನ್ನು ತೆಗೆದುಕೊಂಡು ನಮ್ಮ ಜಮೀನಿಗೆ ಬಂದರು. ಆಗ ನಾನು, ಚಾಸಾ.7 ಮಹೇಶ, ಫ್ರಾಸಾ.3 ಚಂದ್ರಮ್ಮ, ಫ್ರಾಸಾ.1 ರಮೇಶ ಮತ್ತು ಫ್ರಾಸಾ.2 ಉಮೇಶರವರು ಜಮೀನಿನಲ್ಲಿದ್ದೆವು. ಆಗ ಫ್ರಾಸಾ.1 ಮತ್ತು ಚಾಸಾ.7 ರವರು ತಿಂಡಿಯನ್ನು ತಿನ್ನುತ್ತಿದ್ದರು. ಫ್ರಾಸಾ.3 ರವರು ಅವರಿಗೆ ಬಡಿಸುತ್ತಿದ್ದರು. ಫ್ರಾಸಾ.2 ರವರು ಅಲ್ಲಿಯೇ ಇದ್ದರು. ನಾನು ಗಿಡಗಳನ್ನು ಕೀಳುತ್ತಿದ್ದೆನು. ಅಷ್ಟರಲ್ಲಿ ಆರೋಪಿ ನಮ್ಮ ಜಮೀನಿನ ಮುಂದೆ ಹೋಗುವಾಗ ನಮ್ಮ ಜಮೀನಿನ

ಪಕ್ಕದಲ್ಲಿದ್ದ ರಸ್ತೆಯಲ್ಲಿ ನಿಂತು ಸೂಳೆ ಮುಂಡೆ, ನಮ್ಮದು ಕಣೆ ಆಸ್ತಿ ನಮ್ಮ ಹೊಲಕ್ಕೆ ನೀನು ಯಾಕೆ ಬಂದಿದ್ದೀಯಾ ಎಂದು ಬೈದು ಕೈಯಿಂದ ನನ್ನ ಕಪಾಳಕ್ಕೆ ಹೊಡೆದನು. ನನ್ನ ಜಾಕೀಟನ್ನು ಹರಿದು ಹಾಕಿದನು. ಸೂಳೆಮುಂಡೆ, ಬೇರ್ವಸಿ ಮುಂಡೆ ಎಂದು ಕೆಟ್ಟ ಮಾತುಗಳಿಂದ ಬೈದು ನಿಮ್ಮನ್ನು ಇಲ್ಲೇ ಹೂತು ಹಾಕುತ್ತೇನೆ ಎಂದು ಬೈದನು. ಅಡಿಕೆ ದಬ್ಬೆಯನ್ನು ತೆಗೆದುಕೊಂಡು ನನ್ನ ಎರಡೂ ಕೈಗಳಿಗೆ ಹೊಡೆದನು ಮತ್ತು ನನ್ನ ಸೀರೆಯನ್ನು ಹಿಡಿದು ಎಳೆದಾಡಿದನು. ಅದರಿಂದ ನನ್ನ ಮರ್ಯಾದೆ ಹೋಯಿತು. ನನ್ನನ್ನು ಬಿಡಿಸಲು ಬಂದ ಪ್ರಾಸಾ.2 ಉಮೇಶ್ ರವರ ಎಡಕೈ ಮತ್ತು ತಲೆಗೆ ಆರೋಪಿ ಅಡಿಕೆ ದಬ್ಬೆಯಿಂದ ಹೊಡೆದನು. ಅದರಿಂದ ಪ್ರಾಸಾ.2 ರವರ ತಲೆಗೆ ಗಾಯವಾಗಿ ರಕ್ತ ಬಂದಿತು. ಆರೋಪಿ ಪ್ರಾಸಾ.3 ರವರನ್ನು ಕೈಯಿಂದ ನೂಕಿದನು. ಆಗ ಆಕೆ ಜಮೀನಿನಲ್ಲಿದ್ದ ಕಲ್ಲಿನ ಮೇಲೆ ಬಿದ್ದಳು. ನಂತರ ಆರೋಪಿ ಅಡಿಕೆ ದಬ್ಬೆಯಿಂದ ಪ್ರಾಸಾ.1 ರವರ ಎಡಕಣ್ಣಿನ ಹತ್ತಿರ ಹಣೆಗೆ ಹೊಡೆದನು.

**6.** ನಂತರ ಚಾಸಾ.5 ಮತ್ತು ಚಾಸಾ.7 ರವರು ನನ್ನನ್ನು, ಪ್ರಾಸಾ.1 ಮತ್ತು ಪ್ರಾಸಾ.2 ರವರನ್ನು ಬೀರೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ನಾವು ಚಿಕಿತ್ಸೆಯನ್ನು ಪಡೆದುಕೊಂಡೆವು. ಘಟನೆ ಸಮಯದಲ್ಲಿ ನಾನು ಧರಿಸಿದ್ದ ಸೀರೆ ಮತ್ತು ಜಾಕೆಟ್ ಹರಿದಿತ್ತು ಮತ್ತು ಆ ಸಮಯದಲ್ಲಿ ಗಾಯ ಗೊಂಡಿದ್ದ ಪ್ರಾಸಾ.1 ಮತ್ತು ಪ್ರಾಸಾ.2 ರವರನ್ನು ಕರೆದುಕೊಂಡು ಹೋಗುವಾಗ ಅವರಿಗೆ ಆಗಿದ್ದ ಗಾಯದ ರಕ್ತ ನನ್ನ ಬಟ್ಟೆಗೆ ತಾಗಿತ್ತು. ಹಾಗಾಗಿ ನಾನು ಮನೆಗೆ ವಾಪಸ್ಸು ಹೋದ ಬಳಿಕ ಅವುಗಳನ್ನು ಬದಲಾಯಿಸಿದೆನು. ಆದರೆ ಅವುಗಳು ನನಗೆ

ಪುನಃ ಸಿಗಲಿಲ್ಲ. ಆದ್ದರಿಂದ ನಾನು ಅವುಗಳನ್ನು ಪೊಲೀಸರಿಗೆ ಕೊಟ್ಟಿಲ್ಲ.

7. ಸಾಕ್ಷಿಗೆ ಈಗಾಗಲೇ ನಿಪಿ.4 ಮತ್ತು ನಿಪಿ.5 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಮೇಲೆ ಹೇಳಿದಂತೆ ಗಲಾಟೆಯಾದ ಸ್ಥಳ ಕಂಡು ಬರುವುದಾಗಿ ನುಡಿದಿರುತ್ತಾರೆ.

8. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ಅಡಿಕೆ ದಬ್ಬೆಯನ್ನು ನೋಡಿ ಆ ದಿನ ಆರೋಪಿ ನನಗೆ, ಫ್ರಾಸಾ,1 ಮತ್ತು ಫ್ರಾಸಾ.2 ರವರಿಗೆ ಹೊಡೆಯಲು ಬಳಸಿದ ದಬ್ಬೆ ಎಂದು ನುಡಿದಿರುತ್ತಾರೆ.

9. ಘಟನೆಯ ಬಗ್ಗೆ ಫ್ರಾಸಾ.1 ರವರು ಪೊಲೀಸರಿಗೆ ದೂರನ್ನು ಕೊಟ್ಟಿದ್ದರು. ದಿನಾಂಕ 16.05.2020 ರಂದು ನಾನು ಪೊಲೀಸರನ್ನು ಗಲಾಟೆ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದೆನು. ಆಗ ನಾನು ಅವರಿಗೆ ಘಟನೆಯ ಬಗ್ಗೆ ಹೇಳಿಕೆಯನ್ನು ನೀಡಿದ್ದೇನೆ.

10. ಘಟನೆಯಾದ 4 ತಿಂಗಳ ನಂತರ ಬೀರೂರು ಪೊಲೀಸರು ನನ್ನನ್ನು ಕಡೂರಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಛೇರಿಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಜಡ್ಜ್ ಸರ್ ಮೊಬೈಲ್ ನಲ್ಲಿ ಆನ್ ಲೈನ್ ಮೂಲಕ ನನ್ನನ್ನು ವಿಚಾರಿಸಿದರು ಆಗ ನಾನು ಅವರಿಗೆ ಈ ದಿನ ನಿಮಗೆ ತಿಳಿಸಿದ ಎಲ್ಲಾ ವಿಚಾರಗಳನ್ನು ತಿಳಿಸಿದ್ದೇನೆ.

**(ಪಾಟೀ ಸವಾಲು: ಆರೋಪಿ ಪರ ವಕೀಲರು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಸಾಕ್ಷಿದಾರರ ವಿಚಾರಣೆಯಾಗುವವರೆಗೆ ಪ್ರಸುತ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯವು ಈ ಹಿಂದೆ ಪುರಸ್ಕರಿಸಿರುವ ಕಾರಣ ಸಾಕ್ಷಿಯ ಪಾಟೀ ಸವಾಲನ್ನು ಮುರಿದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ